# ಕರ್ನಾಟಕ ಸರ್ಕಾರ

ಸಂಖ್ಯೆ: RDC-EGS/347/2022(Part-1)
(ಇ-771166)

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು ,ದಿನಾಂಕ : 07.06.2022

**ಇವರಿಂದ:**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಇವರಿಗೆ:**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್

**ಮಾನ್ಯರೇ,**

**ವಿಷಯ** : ಗ್ರಾಮ ಪಂಚಾಯಿತಿಯ ಜಲಮೂಲಗಳ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಕೈಗೊಳ್ಳಲು ಮಾರ್ಗಸೂಚಿಯನ್ನು ಹೊರಡಿಸುವ ಬಗ್ಗೆ.

**ಉಲ್ಲೇಖ** :
1. 2022-23ನೇ ಸಾಲಿನ ರಾಜ್ಯದ ಆಯವ್ಯಯ ಕಂಡಿಕೆ – 216 ರಲ್ಲಿ **ಸಮಗ್ರ ಕೆರೆ ಅಭಿವೃದ್ಧಿ** ಕುರಿತು ದಿನಾಂಕ: 04.03.2022ರಂದು ಮಾನ್ಯ ಮುಖ್ಯಮಂತ್ರಿರವರ ಘೋಷಣೆ.
2. ದಿನಾಂಕ: 24-04-2022 ರಂದು ಪಂಚಾಯತ್ ರಾಜ್ ದಿನದಂದು ಸನ್ಮಾನ್ಯ ಪ್ರಧಾನ ಮಂತ್ರಿರವರ **ಮಿಷನ್ ಅಮೃತ್ ಸರೋವರ** ಕಾರ್ಯಕ್ರಮದ ಘೋಷಣೆ.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2022-23 ನೇ ಸಾಲಿನ ರಾಜ್ಯ ಆಯವ್ಯಯದಡಿ ಘೋಷಿಸಲಾದಂತೆ, ರಾಜ್ಯದ 33000 ಗ್ರಾಮ ಪಂಚಾಯಿತಿ ಕೆರೆಗಳನ್ನು ಸರ್ವೇ ಮಾಡಿಸಿ, ಪ್ರಸ್ತುತ ಪ್ರಾರಂಭಿಕ ಹಂತವಾಗಿ 1000 ಕೆರೆಗಳನ್ನು ಗುರುತಿಸಿ, ಸಮಗ್ರ ಅಭಿವೃದ್ಧಿಪಡಿಸಲು ಸರ್ಕಾರವು ಉದ್ದೇಶಿಸಿರುತ್ತದೆ ಮತ್ತು ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ "ಮಿಷನ್ ಅಮೃತ್ ಸರೋವರ" ಕಾರ್ಯಕ್ರಮದಡಿ ಪ್ರತಿ ಜಿಲ್ಲೆಯಲ್ಲಿ ಕನಿಷ್ಠ 75 ಹೊಸದಾಗಿ ಜಲಮೂಲಗಳನ್ನು (Pond's) ನಿರ್ಮಿಸುವಂತೆ ಕೇಂದ್ರ ಸರ್ಕಾರವು ನಿರ್ದೇಶಿಸಿದೆ.

ಮೇಲಿನ ಹಿನ್ನೆಲೆಯಲ್ಲಿ, ಸದರಿ ಯೋಜನೆಗಳಡಿ ಗ್ರಾಮ ಪಂಚಾಯಿತಿ ಕೆರೆಗಳನ್ನು ಆಯ್ಕೆ ಮಾಡಲು ಜಿಲ್ಲಾವಾರು ಗುರಿಯನ್ನು ನಿಗದಿಪಡಿಸಿ (ಅನುಬಂಧ-1ರಲ್ಲಿರುವಂತೆ), ಮೇಲ್ಕಂಡ ಕಾರ್ಯಕ್ರಮಗಳನ್ನು ನಿಯಾಮಾನುಸಾರ ಅನುಷ್ಠಾನಗೊಳಿಸಲು ಮಾರ್ಗಸೂಚಿಯನ್ನು ತಯಾರಿಸಿ ಈ ಪತ್ರದೊಂದಿಗೆ ಲಗತ್ತಿಸಿ ಹೊರಡಿಸಲಾಗಿದೆ.

ಸದರಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಂಡು, ಈ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವಂತೆ ತಿಳಿಸಿದೆ ಮತ್ತು ಕಾಲಕಾಲಕ್ಕೆ ಸರಿಯಾಗಿ ಪ್ರಗತಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿದೆ.

ಲಗತ್ತು: ಮಾರ್ಗಸೂಚಿ &
ಅನುಬಂಧ -1

ತಮ್ಮ ವಿಶ್ವಾಸಿ,

7/6/2022
**(ಎಲ್.ಕೆ.ಅತೀಕ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಗ್ರಾಮ ಪಂಚಾಯಿತಿಯ ಜಲಮೂಲಗಳ ಅಭಿವೃದ್ಧಿ ಮತ್ತು ನಿರ್ವಹಣೆ ಕೈಗೊಳ್ಳಲು ಮಾರ್ಗಸೂಚಿ-2022

**ಓದಲಾಗಿದೆ:**

1. 2022-23ನೇ ಸಾಲಿನ ರಾಜ್ಯದ ಆಯವ್ಯಯ ಕಂಡಿಕೆ - 216 ರಲ್ಲಿ **ಸಮಗ್ರ ಕೆರೆ ಅಭಿವೃದ್ಧಿ**ಕುರಿತು ದಿನಾಂಕ: 04.03.2022ರಂದು ಮಾನ್ಯ ಮುಖ್ಯಮಂತ್ರಿರವರ ಘೋಷಣೆ.
2. ದಿನಾಂಕ: 24-04-2022 ರಂದು ಪಂಚಾಯತ್ ರಾಜ್ ದಿನದಂದು ಸನ್ಮಾನ್ಯ ಪ್ರಧಾನಮಂತ್ರಿರವರ **ಮಿಷನ್ ಅಮೃತ್ ಸರೋವರ** ಕಾರ್ಯಕ್ರಮದ ಘೋಷಣೆ

**ಪೀಠಿಕೆ:**

ಪ್ರಾಚೀನ ಕಾಲದಿಂದಲೂ ಕೆರೆಗಳು ನಮ್ಮ ಸಾಮಾಜಿಕ ಹಾಗೂ ಆರ್ಥಿಕ ಚಟುವಟಿಕೆಗಳೊಂದಿಗೆ ಬೆಳೆದು ಬಂದಿವೆ. ನೀರಾವರಿಯು ಕೆರೆಗಳ ಪ್ರಮುಖ ಉಪಯೋಗವಾದರೆ, ಕೆರೆಗಳಿಂದ ಮೀನುಗಾರಿಕೆ, ದನಕರುಗಳಿಗೆ ಕುಡಿಯುವ ನೀರು, ಜನಸಾಮಾನ್ಯರಿಗೆ ಕುಡಿಯುವ ಹಾಗೂ ದಿನ ಬಳಕೆಯ ನೀರು, ಪರಿಸರದ ಬದಲಾವಣೆಗೆ, ಪಶು-ಪಕ್ಷಿಗಳಿಗೆ ಇವುಗಳಿಗೆಲ್ಲ ಕೆರೆಯೇ ಆಧಾರ. ಹೀಗೆ ಹತ್ತಾರು ಬಗೆಯ ಔಚಿತ್ಯವನ್ನು ಕೆರೆಗಳು ಹೊಂದಿವೆ. ಅದಕ್ಕಿಂತಲೂ ಮಹತ್ವದ್ದಾಗಿ ಕೆರೆಗಳಿಂದ ಭೂ ಅಂತರ್ಜಲದ ಪ್ರಮಾಣ ಹೆಚ್ಚಾಗುವುದು ಕಂಡುಬಂದಿದ್ದು, ಕೆಲವು ಕೆರೆಗಳನ್ನು ಅಂತರ್ಜಲ ಹೆಚ್ಚಿಸಲೆಂದೇ ನಿರ್ಮಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ಹವಾಮಾನ ವೈಪರೀತ್ಯದಿಂದಾಗಿ ಏರುತ್ತಿರುವ ಜಾಗತಿಕ ತಾಪಮಾನದಿಂದ ಅಂತರ್ಗತ ಜಲಮೂಲಗಳು ಬತ್ತಿ ಹೋಗುತ್ತಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗಾಗಿ ಹಾಗೂ ಕೃಷಿ ಚಟುವಟಿಕೆಗಳಿಗೆ ಅತ್ಯಾವಶ್ಯಕವಾಗಿ ಅಗತ್ಯವಿರುವ ನೀರಿಗಾಗಿ ಹಾಹಾಕಾರ ತಲೆದೋರುತ್ತಿರುವುದನ್ನು ಮನಗಂಡು ಇದಕ್ಕೆ ಪೂರಕವಾಗಿ ಪರಿಹಾರೋಪ ಮಾರ್ಗವನ್ನು ರೂಪಿಸುವ ನಿಟ್ಟಿನಲ್ಲಿ,

1. 2022-23 ನೇ ಸಾಲಿನ ರಾಜ್ಯ ಆಯವ್ಯಯದಡಿ ಘೋಷಿಸಲಾದಂತೆ, ರಾಜ್ಯದ 33000 ಗ್ರಾಮ ಪಂಚಾಯಿತಿ ಕೆರೆಗಳನ್ನು ಸರ್ವೇ ಮಾಡಿಸಿ, ಪ್ರಸ್ತುತ ಪ್ರಾರಂಭಿಕ ಹಂತವಾಗಿ 1000 ಕೆರೆಗಳನ್ನು ಗುರುತಿಸಿ, ಅಭಿವೃದ್ಧಿಪಡಿಸಲು ಸರ್ಕಾರವು 100 ಕೋಟಿ ರೂ.ಗಳ ಅನುದಾನ ಒದಗಿಸಲು ಉದ್ದೇಶಿಸಿರುತ್ತದೆ.
2. ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ದಿನಾಂಕ: 23-04-2022 ರಿಂದ 15-08-2023ರ ಅವಧಿಯಲ್ಲಿ **"ಮಿಷನ್ ಅಮೃತ್ ಸರೋವರ"** ಕಾರ್ಯಕ್ರಮದಡಿ ಪ್ರತಿ ಜಿಲ್ಲೆಯಲ್ಲಿ ಕನಿಷ್ಠ 75 ಹೊಸದಾಗಿ ಜಲಮೂಲಗಳನ್ನು **(Pond's)** ನಿರ್ಮಿಸುವಂತೆ ಮತ್ತು ಒಂದು ವೇಳೆ ಹೊಸದಾಗಿ ಜಲಮೂಲಗಳನ್ನು ಸೃಜಿಸಲು ಸಾಧ್ಯವಾಗದಿದ್ದಲ್ಲಿ ಹಾಲಿ ಇರುವ/ಸಾಂಪ್ರದಾಯಿಕ ಜಲಮೂಲಗಳನ್ನು ಪುನಶ್ಚೇತನಗೊಳಿಸುವಂತೆ ಕೇಂದ್ರ ಸರ್ಕಾರವು ನಿರ್ದೇಶಿಸಿದೆ. ಸದರಿ ಜಲಮೂಲಗಳನ್ನು ನಿರ್ಮಿಸಿ ಅಥವಾ ಪುನಶ್ಚೇತನಗೊಳಿಸಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸದ ಸವಿನೆನಪಿಗಾಗಿ **"ಅಮೃತ ಸರೋವರ"** ಎಂದು ಕರೆಯಲಾಗಿರುತ್ತದೆ.

ಮೇಲ್ಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಈ ಮಾರ್ಗಸೂಚಿಗಳು.

## I. ಯೋಜನೆಯ ಆಶಯಗಳು :

- ಅಂತರ್ಜಲ ಮೂಲಗಳನ್ನು ಅಭಿವೃದ್ಧಿಪಡಿಸುವುದು.
- ಮುಂಬರುವ ದಿನಗಳಲ್ಲಿ ನೀರಿಗಾಗಿ ನಡೆಸುವ ಪೈಪೋಟಿಯನ್ನು ಹೋಗಲಾಡಿಸಲು, ಗಾಮೀಣ ಜಲ ಭದ್ರತೆಗೆ ದಕ್ಕೆಯಾಗದಂತೆ ವಿಶೇಷವಾಗಿ ರೈತರು ಹಾಗೂ ಮಹಿಳೆಯರ ನೀರಿನ ಬವಣೆಯನ್ನು ಪರಿಹರಿಸುವುದು.
- ಜಲ ಸಂರಕ್ಷಣೆಯಿಂದ ಕೃಷಿ ಚಟುವಟಿಕೆ, ಅರಣ್ಯೀಕರಣ ಅಭಿವೃದ್ಧಿ ಹಾಗೂ ಪರಿಸರ ಸಮತೋಲನವನ್ನು ರಕ್ಷಿಸಿ ಗ್ರಾಮೀಣ ಭಾಗದ ಜನರ ಆರೋಗ್ಯ ಸುಧಾರಿಸುವುದು.
- ಗ್ರಾಮೀಣ ಜನತೆಗೆ ಉದ್ಯೋಗವಕಾಶವನ್ನು ಕಲ್ಪಿಸುವುದು ಹಾಗೂ ಆರ್ಥಿಕವಾಗಿ ಸ್ವಾವಲಂಬಿಗಳಾಗುವಂತೆ ಮಾಡುವುದು.
- ಗ್ರಾಮೀಣ ಸಮುದಾಯದಲ್ಲಿ ಸಮರ್ಪಕ ನೀರಿನ ಸಂರಕ್ಷಣೆ, ಸದ್ಬಳಕೆ ಕುರಿತಂತೆ ಅರಿವು ಮತ್ತು ಜಾಗೃತಿ ಮೂಡಿಸುವುದು.

## II. ಕಾರ್ಯಕ್ರಮದ ಅನುಷ್ಠಾನ

- ಈಗಾಗಲೇ ಜಲಶಕ್ತಿ ಅಭಿಯಾನ: Catch the rain Campaign -2022 ಅನುಷ್ಠಾನವಾಗುತ್ತಿದ್ದು, ಈ ಅಡಿಯಲ್ಲಿ ಅಮೃತ ಸರೋವರ (ಜಲಮೂಲ) ಗಳನ್ನು ಅನುಷ್ಠಾನಗೊಳಿಸಬಹುದಾಗಿದೆ ಮತ್ತು ಈ ಸಂಬಂಧ ಸರ್ಕಾರದ ಪತ್ರ ಸಂಖ್ಯೆ: RDC-EGS/83/2021(E-476291), ದಿನಾಂಕ:23.03.2021ರಲ್ಲಿ ಸಮಗ್ರ ಕೆರೆ ಅಭಿವೃದ್ಧಿಪಡಿಸಲು ತೆಗೆದುಕೊಳ್ಳಬೇಕಾದ ಚಟುವಟಿಕೆಗಳಿಗೆ ಆದ್ಯತೆ ನೀಡಬಹುದಾಗಿದೆ.

- ಈ ಯೋಜನೆಯನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ)ಯ ಒಗ್ಗೂಡಿಸುವಿಕೆಯೊಂದಿಗೆ ಅನುಷ್ಠಾನ ಮಾಡಬಹುದಾಗಿದ್ದು, ಸದರಿ ಯೋಜನೆಯಡಿ 2022-23ನೇ ಆರ್ಥಿಕ ಸಾಲಿನ ಕ್ರಿಯಾ ಯೋಜನೆಯಲ್ಲಿ ಈಗಾಗಲೇ ಅನುಮೋದಿಸಿದ ಜಲಮೂಲಗಳಿಗೆ ಸಂಬಂಧಪಟ್ಟ ಕಾಮಗಾರಿಗಳನ್ನು ತೆಗೆದುಕೊಳ್ಳಬಹುದಾಗಿರುತ್ತದೆ.

- ಒಂದು ವೇಳೆ ಆಯ್ಕೆ ಮಾಡಬೇಕಾಗಿರುವ ಜಲಮೂಲಗಳ ಕಾಮಗಾರಿಗಳು 2022-23 ಸಾಲಿನ ನರೇಗಾ ಕ್ರಿಯಾ ಯೋಜನೆಯಡಿ ಸೇರ್ಪಡೆ ಆಗದೆ ಇದ್ದಲ್ಲಿ, ಪ್ರಸ್ತುತ ಗ್ರಾಮ ಸಭೆಯಲ್ಲಿ ವಿಶೇಷ ಕ್ರಿಯಾ ಯೋಜನೆಯನ್ನು ರೂಪಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಿಕೊಂಡು ಅನುಷ್ಠಾನಗೊಳಿಸುವುದು.

- ಕಾರ್ಯಕ್ರಮ ಅನುಷ್ಠಾನದ ಎಲ್ಲಾ ಹಂತಗಳಲ್ಲಿ ಜನರ ಸಹಭಾಗಿತ್ವವನ್ನು ಅವಶ್ಯಕವಾಗಿ ತೊಡಗಿಸಿಕೊಳ್ಳುವುದು.

- ಗ್ರಾಮ ಮಟ್ಟದಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಗಳ / ಕೆರೆ ಬಳಕೆದಾರರ ಸಂಘಗಳ ಸಹಮತಿಯೊಂದಿಗೆ ಜಲಮೂಲಗಳನ್ನು ಆಯ್ಕೆ ಮಾಡುವುದು.

- ಅಮೃತ ಸರೋವರಗಳ ಉಪಯೋಗವನ್ನು ನೀರಾವರಿ, ಮೀನುಗಾರಿಕೆ ಅಥವಾ ನೀರಿನ chestnut ಬೇಸಾಯ ಪದ್ಧತಿ ಸೇರಿದಂತೆ, ನೀರಿನ ವಿನ್ಯಾಸ ರಚನಾ ಸಂಭವನೀಯ ಬಳಕೆದಾರರನ್ನು ಗುರುತಿಸಿ ಅವರ ಗುಂಪಿನ ರಚನೆಯನ್ನು ಪ್ರೋತ್ಸಾಹಿಸುವುದು. ಅಮೃತ ಸರೋವರ ಅಭಿವೃದ್ಧಿ ಅಂದರೆ ಕಾರ್ಯಸಾಧ್ಯತೆಗಳ ಮೌಲ್ಯಮಾಪನ, ಕಾರ್ಯಚರಣೆ ಅಥವಾ ಅದರ ಬಳಕೆಯ ಸಂಪೂರ್ಣ ಪ್ರಕಿಯೆಯಲ್ಲಿ ಅಂತಹ ಗುಂಪಿನ ರಚನೆಯನ್ನು ತೊಡಗಿಸಿಕೊಳ್ಳುವುದು.

- ಅಮೃತ ಸರೋವರ ಯೋಜನೆಯಡಿ ಪ್ರತಿ ಜಿಲ್ಲೆಯಲ್ಲಿ ತೆಗೆದು ಕೊಳ್ಳಬಹುದಾದ ಕನಿಷ್ಟ 75 ಜಲಮೂಲಗಳ ಪೈಕಿ,

  ಅ) ಸರ್ಕಾರವು **ಅನುಭಂದ-1** ರಲ್ಲಿ ನಿಗಧಿಪಡಿಸಿರುವ ಜಿಲ್ಲಾವಾರು ಗುರಿಗಳಿಗೆ ಅನುಗುಣವಾಗಿ ಹಾಲಿ ಇರುವ ಕೆರೆಗಳನ್ನು ಮೊದಲು ಆಯ್ಕೆ ಮಾಡುವುದು,
  ಆ) ನಂತರ ಉಳಿಕೆ ಸಂಖ್ಯೆಯಷ್ಟು ಹೊಸ ಜಲಮೂಲ (ಸರೋವರ) ಗಳನ್ನುಸೃಜಿಸಲು ಕ್ರಮ ಕೈಗೊಳ್ಳುವುದು.

- ಕಾರ್ಯಪಾಲಕ ಅಭಿಯಂತರರು, PRED ರವರು ಗ್ರಾಮ ಪಂಚಾಯತ್ ಮಟ್ಟದಲ್ಲಿ ನಡೆಸಿದ ಸಭೆಯ ನಡಾವಳಿಯ ಅನುಮೋದನೆಯೊಂದಿಗೆ ಸಲ್ಲಿಸಿದ ಸರ್ವೇ ಕಾರ್ಯದ ವರದಿಯನ್ನು ಜಿಲ್ಲಾ ಮಟ್ಟದ ಸಮಿತಿಯಲ್ಲಿರಿಸುವುದು.

- ಜಿಲ್ಲಾ ಮಟ್ಟದಲ್ಲಿ **ಕೆರೆಗಳ ಆಯ್ಕೆ ಸಮಿತಿಯು (ಕ್ರಮ ಸಂಖ್ಯೆ-1 ರಲ್ಲಿರುವಂತೆ)** ಈ ಕೆಳಗೆ ಸೂಚಿಸಿರುವ **ಮಾನದಂಡ**ಗಳನ್ನು**(ಕ್ರಮ ಸಂಖ್ಯೆ-2 ರಲ್ಲಿರುವಂತೆ)** ಅನುಸರಿಸಿ, ಸರ್ಕಾರವು ನಿಗಧಿಪಡಿಸಿರುವ ಸಂಖ್ಯೆಗಳಿಗೆ ಅನುಗುಣವಾಗಿ ಹೊಸದಾಗಿ ಅಮೃತ ಸರೋವರದ ನಿರ್ಮಾಣಕ್ಕಾಗಿ ಸ್ಥಳವನ್ನು ಗುರುತಿಸುವುದು ಹಾಗೂ ಹಾಲಿ ಇರುವ ಕೆರೆಗಳ ಪುನಶ್ಚೇತನಕ್ಕಾಗಿ ಕೆರೆಗಳನ್ನು ಆಯ್ಕೆ ಮಾಡುವುದು.

- ಕಾಮಗಾರಿಗಳು ಪ್ರಾರಂಭಿಸುವ ಮೊದಲು, ಕಾಮಗಾರಿ ಗುರುತಿಸುವುದು ಅತೀ ಪ್ರಾಮುಖ್ಯವಾಗಿರುತ್ತದೆ. ಕೇಂದ್ರ ಸರ್ಕಾರ ನೀಡಿರುವ Bhaskaracharya Institute of Space Application and Geomatics-National (BISAG-N) ಹಾಗೂ ಇನ್ನಿತರ ವೈಜ್ಞಾನಿಕ ತಂತ್ರಜ್ಞಾನ/ತಾಂತ್ರಿಕ ತಂಡವನ್ನು ಉಪಯೋಗಿಸಿಕೊಂಡು ಕಾಮಗಾರಿಗಳಿಂದ ನೀರು ಸಂಗ್ರಹ, ಅಂತರ್ಜಲ ಮಟ್ಟ ಹೆಚ್ಚಾಗುವಂತೆ ಕಾಮಗಾರಿಗಳು ಆಯ್ಕೆ ಮಾಡುವುದು ಮಹತ್ವದ್ದಾಗಿದೆ.
- ಪ್ರತಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಒಳಗೊಂಡಂತೆ ಒಟ್ಟಾರೆ 75 ಕೆರೆಗಳನ್ನು ಗುರುತಿಸಲು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರವು (KSRSAC) ಅಭಿವೃದ್ಧಿ ಪಡಿಸಿರುವ

ಕೆಜಿಐಎಸ್-ಟಿಐಎಸ್ ಪೋರ್ಟಲ್ (KGIS-TIS Portal)/ ವೆಬ್‌ಅನ್ವಯಿಕೆಯ(Web Application) URL ಲಿಂಕ್ dev.ksrsac.in/gisviewertis ಅನ್ನು ಬಳಸಲು ಶಿಫಾರಸ್ಸು ಮಾಡಲಾಗಿದೆ.

- ಕೆ.ಜಿಐಎಸ್‌ನಲ್ಲಿನ ಕೆರೆ (ಟ್ಯಾಂಕ್) ಪದರವು ಹತ್ತು ಅಂಕೆಗಳ ವಿಶಿಷ್ಟ (Unique ID) ಕೋಡ್‌ಅನ್ನು (ಹೊಸದಾಗಿ ಅಭಿವೃದ್ಧಿಪಡಿಸುವ ಅಮೃತ ಸರೋವರಗಳನ್ನು ಹೊರತುಕಡಿಸಿ) ಪ್ರದರ್ಶಿಸುತ್ತದೆ. ಸೂಚಿಸಿರುವ ಎಲ್ಲಾ ಮಾನದಂಡಗಳಿಗೆ ಅನುಗುಣವಾಗಿ ಆಯ್ಕೆ ಮಾಡಲ್ಪಟ್ಟ ಕೆರೆಗಳ ವಿಶಿಷ್ಟ ಗುರುತಿನ ಸಂಖ್ಯೆಯನ್ನು ಪ್ರತ್ಯೇಕ ಎಕ್ಸೆಲ್ (Excel) ಹಾಳೆಯಲ್ಲಿ ದಾಖಲಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಕೇಂದ್ರ ಕಛೇರಿಗೆ ಕಳುಹಿಸುವುದು. ಕೆರೆಗಳ ಭೌತಿಕ ಸ್ಥಿತಿಗಳನ್ನು ಇಂದೀಕರಿಸಲು ಮೊಬೈಲ್ ಮತ್ತು ವೆಬ್ ಅನ್ವಯಿಕೆಗಳಲ್ಲಿ ಪ್ರತ್ಯೇಕ ಪದರ / ಬಣ್ಣದ ವೈಶಿಷ್ಟವಾಗಿ ರಚಿಸಲಾಗುತ್ತದೆ.ಎಕ್ಸೆಲ್ (Excel) ಹಾಳೆಯಲ್ಲಿ ಆಯ್ಕೆ ಮಾಡಿರುವ ಕೆರೆಗಳಿಗೆ ಸಂಬಂಧಿಸಿದಂತೆ ಒದಗಿಸಬೇಕಿರುವ ಮಾಹಿತಿಯನ್ನು ಈ ಕೆಳಕಂಡ ನಮೂನೆಯಲ್ಲಿ ಒದಗಿಸುವುದು.

| Sl.No. | Unique ID | District | Taluk | Gram Panchayat | Village |
|---|---|---|---|---|---|
| 1 | 2 | 3 | 4 | 5 | 6 |

- ಒಂದು ವೇಳೆ ಗುರುತಿಸಲ್ಪಟ್ಟ ಜಲ ಮೂಲಗಳು ಅರಣ್ಯ ಪ್ರದೇಶಗಳಲ್ಲಿ ಇದ್ದರೆ ಅರಣ್ಯ ಇಲಾಖೆಯಿಂದ ನಿಯಮಾನುಸಾರ ನಿರಾಕ್ಷೇಪಣಾ ಪತ್ರವನ್ನು ಪಡೆದು ಅನುಷ್ಠಾನ ಮಾಡುವುದು.
- ಜಿಲ್ಲಾ ಮಟ್ಟದ ಸಮಿತಿಯು ಮೊದಲ ಹಂತದಲ್ಲಿ ಗ್ರಾಮದ ಭೌಗೋಳಿಕ ಹಿನ್ನೆಲೆ ಆಧರಿಸಿ, (ಜಿ.ಐ.ಎಸ್) ಅಗತ್ಯತೆ ಹಾಗೂ ಸ್ಥಳೀಯ ಅವಶ್ಯಕತೆಗನುಸಾರ ಆಯ್ಕೆಗೊಂಡ ಜಲಮೂಲಗಳ ವಿವರಗಳ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವುದು.

- ಸರ್ಕಾರದ ಅನುಮೋದನೆ ತರುವಾಯ ಈ ಕೆಳಗೆ ನೀಡಿರುವ **ಕಾಮಗಾರಿಗಳ ವಿವರ**ವನ್ನು**(ಕ್ರಮ ಸಂಖ್ಯೆ-3 ರಲ್ಲಿರುವಂತೆ)** ಒಳಗೊಂಡಂತೆ ಗ್ರಾಮ ಪಂಚಾಯತ್ ಮಟ್ಟದಲ್ಲಿ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಜಿಲ್ಲಾ ಪಂಚಾಯತ್‌ಗಳಿಂದ ಆಡಳಿತಾತ್ಮಕ ಅನುಮೋದನೆ ನೀಡುವುದು.

- ಅನುಮೋದಿತ ಕ್ರಿಯಾ ಯೋಜನೆಯನ್ವಯ ಆಯಾ ಯೋಜನೆಗಳ (ನರೇಗಾ, 15 ನೇ ಹಣಕಾಸು, ಇತ್ಯಾದಿ) ಮಾರ್ಗಸೂಚಿಯನ್ನು ಅನುಸರಿಸಿ ಗ್ರಾಮ ಪಂಚಾಯಿತಿ/ ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ KTPP ನಿಯಾಮಾನುಸಾರ ಇ - ಟೆಂಡರ್ ಕರೆದು ಕಾಮಗಾರಿಯನ್ನು ಪೂರ್ಣಗೊಳಿಸುವುದು.

- ಸರ್ಕಾರದಿಂದ ಬಿಡುಗಡೆಯಾದ ಅನುದಾನ ಮತ್ತು 15 ನೇ ಹಣಕಾಸು ಯೋಜನೆಗೆ ಸಂಬಂಧಿಸಿದ ಕಾಮಗಾರಿ ಕೈಗೊಳ್ಳುವ ಪೂರ್ವದಲ್ಲಿ ಕ್ರಿಯಾ ಯೋಜನೆಯಲ್ಲಿ ವಿವರಿಸಿದಂತೆ ಕಾಮಗಾರಿಯ ವಾಸ್ತವಿಕ ಸ್ಥಿತಿಯ ಛಾಯಾಚಿತ್ರ, ಕಾಮಗಾರಿ ಪ್ರಾರಂಭಗೊಂಡ ತರುವಾಯದ ಛಾಯಾಚಿತ್ರ ಮತ್ತು ಪೂರ್ಣಗೊಂಡ ಕಾಮಗಾರಿಯ ಛಾಯಾಚಿತ್ರವನ್ನು ಕಾಮಗಾರಿಗಳ ವಿವರದೊಂದಿಗೆ GSK ತಂತ್ರಾಂಶದಲ್ಲಿ ಅಳವಡಿಸುವುದು.

- ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕೈಗೊಂಡ ಕಾಮಗಾರಿಗಳಿಗೆ ಮೂರು ವಿಭಿನ್ನ ಹಂತಗಳಲ್ಲಿ ಜಿಯೋ-ಟ್ಯಾಗ್ ಮಾಡುವುದು. ಅಂದರೆ ಕಾಮಗಾರಿ ನಡೆಯುವ ಮೊದಲು, ಕಾಮಗಾರಿ ನಡೆಯುವ ಸಮಯದಲ್ಲಿ ಮತ್ತು ಕಾಮಗಾರಿ ಪೂರ್ಣಗೊಳಿಸಿದ ನಂತರ ನಿರ್ವಹಿಸುವುದು.

- ಕಾರ್ಯಕ್ರಮವನ್ನು ಅತ್ಯುತ್ತಮವಾಗಿ ಅನುಷ್ಠಾನಗೊಳಿಸಲು ಅತ್ಯಂತ ವಿಶ್ವಾಸಾರ್ಹ ರೀತಿಯಲ್ಲಿ ಮಾಡುವುದಕ್ಕೆ remote sensing ಮತ್ತು geospatial ನಂತಹ ಇತ್ತೀಚಿನ ಮತ್ತು ಅತ್ಯಂತ ಸೂಕ್ತವಾದ ತಂತ್ರಜ್ಞಾನಗಳನ್ನು ಬಳಸಬೇಕು.

- ಈಗಾಗಲೇ ಅಮೃತ ಸರೋವರ portal ನ್ನು Bhaskaracharya Institute of Space Application and Geomatics-National (BISAG-N) ಅಭಿವೃದ್ಧಿ ಪಡಿಸಿದ್ದು, ಸ್ಥಳ ಆಯ್ಕೆ, ಪ್ರಗತಿ, ಛಾಯಾಚಿತ್ರ ಮತ್ತು ಇತರೆ ಸಂಬಂಧಪಟ್ಟ ಮಾಹಿತಿಗಳನ್ನು ಅಮೃತ್ ಸರೋವರ portal ನಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು. ಅಮೃತ್ ಸರೋವರ ಪೋರ್ಟಲ್ ಮತ್ತು ಮೊಬೈಲ್ ಅಪ್ಲಿಕೇಶನ್ ಅನ್ನು ಭಾಸ್ಕರಾಚಾರ್ಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಅಭಿವೃದ್ಧಿಪಡಿಸಿದೆ. ಪ್ರಗತಿಯನ್ನು ಪತ್ತೆಹಚ್ಚಲು ಬಾಹ್ಯಾಕಾಶ ಅಪ್ಲಿಕೇಶನ್ ಮತ್ತು ಜಿಯೋಮ್ಯಾಟಿಕ್ಸ್-ನ್ಯಾಷನಲ್ (BISAG-N) ಅನ್ನು ಜಿಲ್ಲೆಗಳಲ್ಲಿ ಅನುಷ್ಠಾನವಾಗುವ ಮಿಷನ್ ಅಮೃತ ಸರೋವರದ ಕಾರ್ಯನಿರ್ವಹಣೆಗಾಗಿ ಬಳಸುವುದು.

- ಕೇಂದ್ರ ಸರ್ಕಾರವು ನೀಡಿರುವ **ಮಿಷನ್ ಅಮೃತ್ ಸರೋವರ ಕಾರ್ಯಕ್ರಮದ ಮಾರ್ಗಸೂಚಿಗಳನ್ನು** ಅವಲೋಕಿಸಿ, ಅನುಸರಣೆ ಮಾಡುವುದು ಕಡ್ಡಾಯವಾಗಿರುತ್ತದೆ.

- ಆಯ್ಕೆ ಮಾಡಿದ ಜಲಮೂಲಗಳ ಸಮಗ್ರ ಅಭಿವೃದ್ದಿಪಡಿಸಿದ ತರುವಾಯ ಸಂಪೂರ್ಣ ವಿವರದೊಂದಿಗೆ ನಾಮಫಲಕ ಅಳವಡಿಸುವುದು.

**ಗ್ರಾಮ ಪಂಚಾಯಿತಿ ಮಟ್ಟದಲ್ಲಿ:**

- ಗ್ರಾಮ ಪಂಚಾಯಿತಿಗಳು ಈ ಯೋಜನೆಯಡಿ ಆಯ್ಕೆ ಮಾಡುವ ಜಲಮೂಲಗಳಿಗೆ ಗ್ರಾಮ ಸಭೆಯ ಅನುಮೋದನೆ ಪಡೆಯುವುದು.
- ಸಮುದಾಯದ ಹಿತಾಸಕ್ತಿಯನ್ನು ಕಾಪಾಡುವ ಸಲುವಾಗಿ ಸ್ಥಳೀಯ ಅವಶ್ಯಕತೆಗೆ ಅನುಸಾರ ಕಾಮಗಾರಿಗಳನ್ನು ಆಯ್ಕೆ ಮಾಡುವುದು.
- ಜಲಮೂಲಗಳನ್ನು ಸೃಜಿಸಲು, ಅಭಿವೃದ್ದಿಪಡಿಸಲು, ನಿರ್ವಹಿಸಲು, ಸುವ್ಯವಸ್ಥಿತವಾಗಿಡಲು ಕರ್ನಾಟಕ ಸರ್ಕಾರದ ಆದೇಶ ಪತ್ರ ಸಂಖ್ಯೆ: ಗ್ರಾಅಪ 1309 ಗ್ರಾಪಂಅ 2017 ದಿನಾಂಕ: 17-01-2020 ರನ್ವಯ ರಚನೆಯಾಗಿರುವ ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಗಳ/ ಕೆರೆ ಬಳಕೆದಾರರ ಸಂಘಗಳ ನೆರವನ್ನು ಪಡೆಯುವುದು.
- ಗ್ರಾಮ ಪಂಚಾಯತ್ ಅಧ್ಯಕ್ಷರು, ಪಂಚಾಯತ್ ಅಭಿವೃದ್ದಿ ಅಧಿಕಾರಿ ಹಾಗೂ ಸದಸ್ಯರು ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳನ್ನೊಳಗೊಂಡಂತೆ ರಚಿಸಿರುವ ಸಮಿತಿಗಳಿಗೆ ಜವಾಬ್ದಾರಿ ಹಾಗೂ ಹೊಣೆಗಾರಿಕೆಯನ್ನು ನೀಡುವುದು.
- ಗ್ರಾಮ ಪಂಚಾಯಿತಗಳು ಕ್ರಿಯಾ ಯೋಜನೆಗಳನ್ನು ಸಿದ್ದಪಡಿಸಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು.
- ಈ ಯೋಜನೆಯ ಕಾಮಾಗಾರಿಗಳನ್ನು ಕೆ.ಟಿ.ಪಿ.ಪಿ ಅಧಿನಿಯಮವನ್ನು ಅನುಸರಿಸಿ, ನಿಯಾಮಾನುಸಾರ ಅನುಷ್ಠಾನಗೊಳಿಸುವುದು.
- ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಕಡತಗಳು, ಲೆಕ್ಕ ಪತ್ರಗಳು ಹಾಗೂ ದಾಖಲಿಕರಣವನ್ನು ಸಮರ್ಪಕವಾಗಿ ನಿರ್ವಹಿಸಿ ಪಾರದರ್ಶಕತೆಯನ್ನು ಕಾಪಾಡುವುದು. ಕಾರ್ಯಕ್ರಮದ ಪ್ರಗತಿಯ ವರದಿಯನ್ನು ತಯಾರಿಸುವಾಗ ಸೂಕ್ತವಾದ ಛಾಯಾ ಚಿತ್ರಗಳು ಮತ್ತು ವಿಡಿಯೋ ಚಿತ್ರಗಳನ್ನು ದಾಖಲೆಯ ರೂಪದಲ್ಲಿ ನಿರ್ವಹಿಸುವುದನ್ನು ಖಾತರಿ ಪಡಿಸುವುದು ಪಂಚಾಯಿತಿ ಮಟ್ಟದ ಅಧಿಕಾರಿಯ ಜವಾಬ್ದಾರಿಯಾಗಿರುತ್ತದೆ.

**ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ :**

- ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಡಳಿತಾತ್ಮಕ ತಂಡವನ್ನು ರಚಿಸಿ ತಾಲ್ಲೂಕು ಮಟ್ಟದಲ್ಲಿ ತಾಂತ್ರಿಕ ತಂಡವನ್ನು (ಸಹಾಯಕ ಕಾರ್ಯಪಾಲಕ ಅಭಿಯಂತರರು/ಜಲಾನಯನ/ಕೃಷಿ ಅಧಿಕಾರಿಗಳು) ಒಳಗೊಂಡಂತೆ ಸೂಕ್ತ ಜಲಮೂಲ ಸ್ಥಳಗಳನ್ನು ವೈಜ್ಞಾನಿಕವಾಗಿ ಗುರುತಿಸಿ, ಧೃಡಿಕರೀಸಿ ನಿಯಾಮಾನುಸಾರ ಕ್ರಿಯಾ ಯೋಜನೆ ರೂಪಿಸುವುದು.
- ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯಿತಿಗಳಿಂದ ಸ್ವೀಕೃತವಾದ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆಗೆ ಸಲ್ಲಿಸುವುದು.
- ಸದರಿ ಯೋಜನೆಗೆ ಆರ್ಥಿಕ ದೇಣಿಗೆ, ಶಾಸಕರ ಕ್ಷೇತ್ರಾಭಿವೃದ್ದಿ ಅನುದಾನ, CSR ಅನುದಾನಗಳನ್ನು ಒಗ್ಗೂಡಿಸಲು ಆದ್ಯತೆ ನೀಡುವುದು.
- ಈ ಯೋಜನೆಯಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿರುವ ಅನುಷ್ಠಾನ ಸಂಸ್ಥೆಗಳ ಪ್ರಗತಿಯನ್ನು ಪ್ರತಿ ಮಾಹೆ ಪರಿಶೀಲಿಸುವುದು.

**ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ:**

- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸರ್ಕಾರವು ನಿಗದಿಪಡಿಸಿದ ಜಿಲ್ಲಾವಾರು ಗುರಿಗಳಿಗೆ ಅನುಗುಣವಾಗಿ ಆಯ್ಕೆ ಸಮಿತಿಯಿಂದ ಅನುಮೋದಿಸಲ್ಪಟ್ಟ ಜಲಮೂಲಗಳ ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸುವುದು.
- ಆಯ್ಕೆಯಾದ ಜಲಮೂಲ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ

ನೀಡುವುದು.

- ಸದರಿ ಯೋಜನೆಗೆ ಆರ್ಥಿಕ ದೇಣಿಗೆ ,ಶಾಸಕರ ಕ್ಷೇತ್ರಾಭಿವೃದ್ಧಿ ಅನುದಾನ, CSR ಅನುದಾನಗಳನ್ನು ಒಗ್ಗೂಡಿಸುವುದು.
- ಅನಿವಾರ್ಯ ಕಾರಣಗಳಿಂದಾಗಿ ಆಯ್ಕೆಯಾದ ಯಾವುದಾದರೂ ಜಲಮೂಲಗಳನ್ನು ಈ ಯೋಜನೆಯಡಿಯಲ್ಲಿ ಅನುಷ್ಠಾನಕ್ಕೆ ತೆಗೆದುಕೊಳ್ಳಲು ಸಾಧ್ಯವಾಗದೇ ಇದ್ದಲ್ಲಿ, ಅಂತಹ ಜಲಮೂಲದ ಬದಲಿಗೆ ಮಾರ್ಗಸೂಚಿಗಳನ್ವಯ ಪರ್ಯಾಯ ಜಲಮೂಲವನ್ನು ಸಮಿತಿಯ ಮುಂದೆ ಮಂಡಿಸಿ, ಸಮಿತಿಯ ಅನುಮೋದನೆ ಪಡೆದುಕೊಂಡು ಬದಲಿ ಜಲಮೂಲದಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.

1. **ಕೆರೆಗಳ ಆಯ್ಕೆ ಸಮಿತಿ:**

ಸರ್ಕಾರದಿಂದ ಅನುಬಂಧ-1 ರಲ್ಲಿ ನಿಗಧಿಪಡಿಸಿರುವ ಸಂಖ್ಯೆಗಳಿಗೆ ಅನುಗುಣವಾಗಿ ಆಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೆರೆಗಳನ್ನು ಆಯ್ಕೆ ಮಾಡಲು ಈ ಕೆಳಕಂಡಂತೆ ಸಮಿತಿಯನ್ನು ರಚಿಸುವುದು.

| | | |
|---|---|---|
| 1. | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ | ಅಧ್ಯಕ್ಷರು |
| 2. | ಅಪರ ಜಿಲ್ಲಾಧಿಕಾರಿಗಳು | ಸದಸ್ಯರು |
| 3. | ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ | ಸದಸ್ಯರು |
| 4. | ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಇಲಾಖೆ | ಸದಸ್ಯರು |
| 5. | ಉಪ ಕಾರ್ಯದರ್ಶಿ (ಅಭಿವೃದ್ಧಿ) | ಸದಸ್ಯರು |
| 6. | ಉಪ ನಿರ್ದೇಶಕರು ( ಭೂ ದಾಖಲೆಗಳು ) | ಸದಸ್ಯರು |
| 7. | ಸಂಬಂಧಪಟ್ಟ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ | ಸದಸ್ಯರು |
| 8. | ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ | ಸದಸ್ಯ ಕಾರ್ಯದರ್ಶಿ |

***ಸೂಚನೆ :*** ***ಅವಶ್ಯಕತೆ ಇದ್ದಲ್ಲಿ ಸಂಬಂಧಪಟ್ಟ ಕೆರೆಯ ಜಿಲ್ಲಾ ಕೆರೆ ಬಳಕೆದಾರರ ಸಂಘದ ಒಬ್ಬ ಪ್ರತಿನಿಧಿಯು ಆಯ್ಕೆ ಸಮಿತಿಯಲ್ಲಿ ವಿಶೇಷ ಆಹ್ವಾನಿತರಾಗಿ ಉಪಸ್ಥಿತರಿರಬಹುದು.***

- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲೆಯ ನೋಡೆಲ್ ಅಧಿಕಾರಿಗಳಾಗಿರುತ್ತಾರೆ ಮತ್ತು ಜಿಲ್ಲಾ ಮಟ್ಟದಲ್ಲಿ ಸದರಿ ಕಾರ್ಯಕ್ರಮದ ಒಟ್ಟಾರೆ ಉಸ್ತುವಾರಿ ಮಾಡುವುದು ಇವರ ಜವಾಬ್ದಾರಿಯಾಗಿರುತ್ತದೆ.

**<u>ಜಿಲ್ಲಾ ನೋಡೆಲ್ ಅಧಿಕಾರಿ (DNO) ರವರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು:</u>**

1. ಕೆರೆಗಳನ್ನು ಗುರುತಿಸಿ ಅಂತಿಮಗೊಳಿಸುವಿಕೆ.
2. ಕಾರ್ಯಕ್ರಮದ ಅನುಷ್ಠಾನ ಮತ್ತು ಕಾಲಮಿತಿಯಲ್ಲಿ ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳುವುದು.
3. ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಸಿದ್ಧಪಡಿಸಿಕೊಳ್ಳುವುದು.
4. ಅನುದಾನದ ಮೂಲಗಳನ್ನು ಮೀಸಲಿರಿಸುವ ವ್ಯವಸ್ಥೆಗೆ ಅನುಮೋದನೆ ನೀಡುವುದು.
5. ಭಾಗವಹಿಸುವ ಜಿಲ್ಲಾ ಮಟ್ಟದ ಇಲಾಖೆಗಳ ನಡುವೆ ಸಮನ್ವತೆಯನ್ನು ಸಾಧಿಸುವುದನ್ನು ಖಾತರಿ ಪಡಿಸಿಕೊಳ್ಳುವುದು.
6. ಯೋಜನೆಯ ಪ್ರಗತಿಯನ್ನು ಕಾರ್ಯಕ್ರಮದ ಪೋರ್ಟಲ್ ಮೂಲಕ ಉಸ್ತುವಾರಿ ಮಾಡುವುದು ಮತ್ತು

ನಿಯಮಿತವಾಗಿ ಮಾಹಿತಿಯನ್ನುಇಂದೀಕರಿಸುವುದಕ್ಕೆ ಜವಾಬ್ದಾರರಾಗಿರುತ್ತಾರೆ.

7. ಮಾಸಿಕ ಪ್ರಗತಿ ಪರಿಶೀಲನೆಯ ವರದಿಯನ್ನು ರಾಜ್ಯ ಮಟ್ಟದ ನೋಡಲ್ ಅಧಿಕಾರಿಯವರಿಗೆ ನೀಡುವುದು.
8. ಕುಂದು ಕೊರತೆಗಳ ನಿವಾರಣೆಗೆ ಮತ್ತು ದೋಷ ನಿವಾರಣೆಗೆ ಜವಾಬ್ದಾರರಾಗಿರುತ್ತಾರೆ.
9. ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪ್ರಗತಿ ಮತ್ತು ಸಮಸ್ಯೆಗಳಿದ್ದರೆ, ಕೇಂದ್ರ ನೋಡಲ್ ಅಧಿಕಾರಿಗೆ ತಿಳಿಸುವುದು.
10. ಮಾಹಿತಿ, ಶಿಕ್ಷಣ ಮತ್ತು ಸಂವಹನಗಳಿಂದ ಕಾರ್ಯಕ್ರಮವನ್ನು ಪ್ರಚುರಪಡಿಸುವುದು.

2. **ಮಾನದಂಡಗಳು :**

- ಆಯ್ಕೆ ಆಗುವ ಕೆರೆಯ ವಿಸ್ತೀರ್ಣ ಕನಿಷ್ಟ 2.25 ಹೆಕ್ಟೇರ್ ನಿಂದ ಗರಿಷ್ಠ 40 ಹೆಕ್ಟೇರ್ ಒಳಗೆ ಇರಬೇಕು ಹಾಗೂ ಕನಿಷ್ಟ 4 ಹೆಕ್ಟೇರ್ ನೀರಾವರಿ ಇರುವ / ನೀರಾವರಿಯಾಗುವಂತಹ ಕೆರೆಗಳನ್ನು ಆಯ್ಕೆ ಮಾಡುವುದು.

- ಹೊಸದಾಗಿ ನಿರ್ಮಿಸುವ ಅಮೃತ ಸರೋವರ ಕನಿಷ್ಠ ಒಂದು ಎಕರೆ (0.4 ಹೆಕ್ಟರ್) ಪ್ರದೇಶವನ್ನು ಹೊಂದಿರತಕ್ಕದ್ದು ಮತ್ತು ಸುಮಾರು 10000 ಘನ ಮೀಟರ್ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿರಬೇಕು.
- ಆಧ್ಯತೆ ಮೇರೆಗೆ BISAG-N ಸಂಸ್ಥೆಯವರು ಈಗಾಗಲೇ ಸೂಕ್ತ ಸ್ಥಳಗಳನ್ನು ಗುರುತಿಸಿದ್ದು, **(https://water.ncog.gov.in/AmritSarovar/proposedSite),** ಸದರಿ ಪಟ್ಟಿಯಲ್ಲಿ ಗುರಿಗಳಿಗೆ ಸಾಕಾಗುವಷ್ಟು ಸ್ಥಳಗಳು ಇಲ್ಲದೆ ಇದ್ದ ಪಕ್ಷದಲ್ಲಿ ವೈಜ್ಞಾನಿಕ ತಂತ್ರಜ್ಞಾನ (ದಿಶಾಂಕ್ / CLART APP) ಮತ್ತು ತಾಂತ್ರಿಕ ತಂಡಗಳು ಪರಿಶೀಲಿಸಿ ಅರ್ಹ ಸ್ಥಳಗಳನ್ನು ಅಂತಿಮಗೊಳಿಸಬಹುದಾಗಿದೆ. ಅಗತ್ಯ ಕ್ರಮ ವಹಿಸಿ ದಿನಾಂಕ:15-08-2022ರೊಳಗೆ ಕನಿಷ್ಟ ಶೇ. 20% ಕಾಮಗಾರಿಗಳು ( ಅಂದರೆ ಒಟ್ಟು 15 ಕಾಮಗಾರಿಗಳು) ಮುಕ್ತಾಯಗೊಂಡಿರಬೇಕು ಹಾಗೂ ಪ್ರತಿ ಜಿಲ್ಲೆಗೆ ನಿಗದಿಪಡಿಸಿರುವ (ಕನಿಷ್ಟ) 75 ಕಾಮಗಾರಿಗಳು ಕಡ್ಡಾಯವಾಗಿ ಪ್ರಗತಿಯಲ್ಲಿರಬೇಕು.

- ಕೆರೆ ನೀರನ್ನು ಅತೀ ಹೆಚ್ಚು ಬಳಕೆ ಮಾಡುವ ಮತ್ತು ಕೆರೆಯ ನೀರಿನ ಮೇಲೆ ಹೆಚ್ಚಿನ ಜನಸಂಖ್ಯೆ ಅವಲಂಬಿತರಾಗಿರುವ ಪ್ರದೇಶಗಳಲ್ಲಿ ಇರುವ ಕೆರೆ ಆಗಿರಬೇಕು.

- ಸಕ್ರೀಯವಾಗಿರುವ ಕೆರೆ ಬಳಕೆದಾರರ ಸಂಘವನ್ನು ಹೊಂದಿರುವ ಅಥವಾ ಈಗಾಗಲೇ ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ರಚನೆಯಾಗಿರುವ ಕೆರೆಗಳಿಗೆ ಆಧ್ಯತೆ ನೀಡುವುದು

- ಬರಪೀಡಿತ ಪ್ರದೇಶಗಳಲ್ಲಿ ನಿರ್ಲಕ್ಷೆಗೆ ಒಳಗಾಗಿ ನಿಷ್ಕ್ರಿಯಗೊಂಡ ಕೆರೆಗಳನ್ನು ಆಯ್ಕೆಮಾಡುವುದು.

- ಕೆರೆಯ ಗುರುತಿಸುವಿಕೆಯಲ್ಲಿ Mapping ಮಾಡಲು ಜಿಲ್ಲೆಯಲ್ಲಿರುವ Natural Resource Data Management System ಇವರ ತಾಂತ್ರಿಕ ನೆರವನ್ನು ಪಡೆದು ಮುಂದಿನ ಕ್ರಮ ಜರುಗಿಸುವುದು.

**3. ಕೆರೆ ಕಾಮಗಾರಿಗಳ ವಿವರ:**

1. ಕಂದಾಯ ಇಲಾಖೆಯ ಸಹಯೋಗದೊಂದಿಗೆ ಎಲ್ಲಾ 33000 ಕೆರೆಗಳನ್ನು ಸರ್ವೇ ಮಾಡಿಸಿ, ಅನಧಿಕೃತ ಒತ್ತುವರಿ ಆಗಿದ್ದಲ್ಲಿ, ಅದನ್ನು ತೆರವುಗೊಳಿಸಲು ಕ್ರಮ ವಹಿಸುವುದು.

   ಕೆರೆಯ ಅಂಚುಗಳನ್ನು ಗುರುತಿಸಿ ಅನಧಿಕೃತ ಒತ್ತುವರಿಯನ್ನು ತಡೆಯುವ ಸಲುವಾಗಿ ಕೆರೆಯ ಗಡಿ ಪ್ರದೇಶದಲ್ಲಿ ಅಂಚು ಕಲ್ಲುಗಳನ್ನು ಅಳವಡಿಸಿ, ಕೆರೆಯ ಸುತ್ತಲೂ ತಂತಿಬೇಲಿಯನ್ನು ಅಳವಡಿಸುವುದು.

2. ಕೆರೆಯ ಹೂಳನ್ನು ವೈಜ್ಞಾನಿಕವಾಗಿ ಅಂದಾಜು ಮಾಡಿ ಹೂಳು ತೆಗೆಯಲು ಕ್ರಮ ವಹಿಸುವುದು ಮತ್ತು ಇದರಿಂದ ಹೊರಬರುವ ಹೂಳನ್ನು ನ್ಯಾಯಯುತವಾಗಿ ವಿಲೇವಾರಿ ಮಾಡಲು ಗ್ರಾಮ ಪಂಚಾಯಿತಿಯು ನಿರ್ಧರಿಸುವುದು
3. ಕೆರೆಯಲ್ಲಿ ಬೆಳೆದಿರುವ ಗಿಡ - ಗಂಟೆಗಳನ್ನು(ಜಂಗಲ್) ವೈಜ್ಞಾನಿಕವಾಗಿ ತೆಗೆಯಿಸುವುದು.

4. ಕೆರೆ ಏರಿಯನ್ನು ಭದ್ರ ಪಡಿಸುವ ಸಲುವಾಗಿ ಆಗತ್ಯವಿದ್ದಲ್ಲಿ ದುರಸ್ತಿ ಕಾರ್ಯ ಕೈಗೊಳ್ಳುವುದು ಮತ್ತು ಏರಿಯನ್ನು ಸ್ಥಿರೀಕರಣಗೊಳಿಸಲು ಇಳಿಜಾರುಗಳಲ್ಲಿ ಹುಲ್ಲುಗಾವಲನ್ನು ಅಭಿವೃದ್ಧಿಪಡಿಸುವುದು.
5. ಕೆರೆಗೆ ಯಾವುದೇ ತ್ಯಾಜ್ಯ ನೀರು ಹರಿದು ಬರದಂತೆ ಕ್ರಮ ವಹಿಸುವುದು. ಒಂದು ವೇಳೆ ತ್ಯಾಜ್ಯ ನೀರು ಹರಿದು ಬರುತ್ತಿದ್ದರೆ, ಬೇರೆ ಕಡೆಗೆ ದಿಕ್ಕು ಬದಲಾಯಿಸಿ ಕೆರೆಯ ಸುತ್ತ ಟ್ರೆಂಚ್ ತೆಗೆಸುವುದು.
6. ಗೂಗಲ್ ಅರ್ಥ್ ಅಥವಾ ದಿಶಾಂಕ್ ಮೊಬೈಲ್ ಅಪ್ಲಿಕೇಶನ್ ಬಳಸಿಕೊಂಡು ಕೆರೆಗೆ

ಸರಾಗವಾಗಿ ನೀರು ಬರುವ ಪೋಷಕ ಕಾಲುವೆ/ಹಳ್ಳಗಳನ್ನು ಗುರುತಿಸಿ ಅವುಗಳನ್ನು ದುರಸ್ತಿಗೊಳಿಸಿ, ಹೂಳನ್ನು ತೆಗೆದು, ಪುನಶ್ಚೇತನಗೊಳಿಸುವುದು. ಈ ಕಾಲುವೆ/ಹಳ್ಳಗಳ ನೀರು ಕೆರೆಗೆ ಪ್ರವೇಶಿಸುವ ಸ್ಥಳದಲ್ಲಿ Silt Trap ನಿರ್ಮಿಸುವುದು. ನಂತರ ಅವುಗಳನ್ನು ರಕ್ಷಿಸಿ ಸರಿಯಾಗಿ ನಿರ್ವಹಣೆ ಮಾಡುವುದು.

7. ಕೆರೆಯ ಕೋಡಿ ಮತ್ತು ರೈತರ ಜಮೀನುಗಳಿಗೆ ನೀರು ಹರಿದು ಹೋಗುವ ಕಾಲುವೆಗಳನ್ನು ದುರಸ್ತಿಗೊಳಿಸುವುದು.
8. ಕೆರೆ ಅಂಚಿನ ಖಾಲಿ ಪ್ರದೇಶಗಳಲ್ಲಿ ಸಸಿಗಳನ್ನು ಬೆಳೆಸುವುದು.
9. 2022-23 ನೇ ಸಾಲಿನಲ್ಲಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯಿಂದ ರಾಜ್ಯದ ಆಯ್ದ ಗ್ರಾಮ ಪಂಚಾಯಿತಿ ಕೆರೆಗಳಲ್ಲಿ ಜಲ ವಿಸ್ತೀರ್ಣಕನುಗುಣವಾಗಿ ಗರಿಷ್ಠ ರೂ.10000/-ಗಳ ಮೌಲ್ಯದ ಮೀನು ಮರಿಗಳನ್ನು ಬಿತ್ತನೆ ಮಾಡಲು ಸಹಾಯಧನ ನೀಡುವುದಾಗಿ ಆದೇಶಿಸಿರುವ ಹಿನ್ನಲೆಯಲ್ಲಿ ನಿರ್ಮಾಣ/ಪುನಶ್ಚೇತನಗೊಳಿಸಿದ ನಂತರ ಈ ಕಾರ್ಯಕ್ರಮದಡಿ ಸಂಯೋಜಿಸಿ ಮೀನುಗಾರರ ಹಾಗೂ ಗ್ರಾಮೀಣ ಕುಟುಂಬದವರಿಗೆ ಜೀವನೋಪಾಯಕ್ಕೆ ಅನುಕೂಲವಾಗುವಂತೆ ಒಗ್ಗೂಡಿಸುವಿಕೆಯಲ್ಲಿ ಸದರಿ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಅನುಷ್ಠಾನಗೊಳಿಸುವುದು.
10. ಜಲಮೂಲಗಳ ಅಂಗಳವನ್ನು ಸುಂದರೀಕರಣಗೊಳಿಸುವ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವುದು. (ಅನುದಾನದ ಲಭ್ಯತೆ ಹಾಗೂ ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ)

**ಅ)** ಸಾರ್ವಜನಿಕರು ವಿಶ್ರಾಂತ್ರಿ ಪಡೆಯಲು ಮತ್ತು ಮಕ್ಕಳು ಆಟವಾಡಲು ಉದ್ಯಾನವನ ನಿರ್ಮಾಣ ಮಾಡುವುದು.

**ಆ)** ಜಲಮೂಲಗಳ ಸುತ್ತ ಸ್ವಚ್ಛತೆ ಕಾಪಾಡಲು ಕಸದ ಬುಟ್ಟಿಯನ್ನು ಅಳವಡಿಸುವುದು

**ಇ)** ಜಲಮೂಲಗಳ ಸುಂದರ ನೋಟ ಸವಿಯಲು ಶಿಖರ/ ಕಾವಲು ಗೋಪುರ (Watch Tower) ವನ್ನು ನಿರ್ಮಾಣ ಮಾಡುವುದು.

**ಈ)** ಜಲಮೂಲಗಳಲ್ಲಿ ದೋಣಿ ವಿಹಾರ ಆಯೋಜಿಸುವುದು.

**ಉ)** ಸಾರ್ವಜನಿಕರಿಗೆ ಜಲಮೂಲ ನೀರಿನ ಸಂರಕ್ಷಣೆ, ಉಪಯೋಗ, ಒತ್ತುವರಿ ಮಾಡಿಕೊಳ್ಳದಿರುವ ಬಗ್ಗೆ ಹಾಗೂ ಜಲಮೂಲಗಳ ಸಮಗ್ರ ಮಾಹಿತಿಯನ್ನುಸಾರ್ವಜನಿಕರಿಗೆ ತಿಳಿಯಪಡಿಸಲು ಮಾಹಿತಿ ಫಲಕಗಳನ್ನು ಅಳವಡಿಸಲು ಗ್ರಾಮ ಪಂಚಾಯಿತಿಯಿಂದ ಕ್ರಮ ವಹಿಸುವುದು.

### III. ಯೋಜನಾ ಅನುದಾನ:

ಈ ಕಾರ್ಯಕ್ರಮದಡಿ ತೆಗೆದುಕೊಳ್ಳಬೇಕಾದ ಕಾಮಗಾರಿಗಳನ್ನು ಹಾಲಿ ಜಾರಿಯಲ್ಲಿರುವ ಯೋಜನೆಗಳ ಒಗ್ಗೂಡಿಸುವಿಕೆ ಮೂಲಕ ಈ ಕೆಳಗೆ ಸಲಹೆ ಮಾಡಿದ ರೀತಿಯಲ್ಲಿ ಅನುಷ್ಠಾನಗೊಳಿಸುವುದು.

| ಕ್ರ.ಸಂ. | ಕಾರ್ಯಕ್ರಮ | ಯೋಜನೆ |
|---|---|---|
| 1. | ಕೆರೆಗಳ ಸರ್ವೇ ಮಾಡುವುದು | ಕಂದಾಯ ಇಲಾಖೆಯ ವತಿಯಿಂದ |
| 2. | ಕೆರೆಯ ಹೂಳನ್ನು ತೆಗೆಯುವುದು | - ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಹಾಗೂ<br>- ಯಂತ್ರ ಬಳಸುವ ಅವಶ್ಯಕತೆ ಇದ್ದ ಕಡೆ ಸರ್ಕಾರದಿಂದ ಲೆಕ್ಕ ಶೀರ್ಷಿಕೆ 4702 ರಡಿ ಬಿಡುಗಡೆ ಮಾಡುವ ಅನುದಾನ ಬಳಸುವುದು |
| 3. | ಅಮೃತ ಸರೋವರ ನಿರ್ಮಾಣ | - ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ,<br>- 15ನೇ ಹಣಕಾಸು ಆಯೋಗದ ಅನುದಾನಗಳ (ನಿರ್ಬಂಧಿತ ಮತ್ತು ಅನಿರ್ಬಂಧಿತ),<br>- PMKSY-WDC, PMKSY-HKKP-RRR,<br>- ಗ್ರಾಮ ಪಂಚಾಯಿತಿಯ ಸ್ವಂತ ಸಂಪನ್ಮೂಲ<br>- ಕೇಂದ್ರ/ರಾಜ್ಯ/ ಜಿಲ್ಲಾ ಪಂಚಾಯಿತಿ ಹಾಗೂ |

| | | |
|---|---|---|
| | | ತಾಲ್ಲೂಕು ಪಂಚಾಯಿತಿಗಳಿಗೆ ವಿವಿಧ ಯೋಜನೆಗಳಲ್ಲಿ ಲಭ್ಯವಿರುವ ಅನುದಾನ ವನ್ನು ಮಾರ್ಗಸೂಚಿಗಳನ್ವಯ ಒಗ್ಗೂಡಿಸುವಿಕೆಯಲ್ಲಿ ಭರಿಸಿ ಅನುಷ್ಠಾನ ಗೊಳಿಸತಕ್ಕದ್ದು. |
| 4. | - ಕೆರೆಗೆ ನೀರು ಹರಿದು ಬರುವ ಕಾಲುವೆಗಳ ಪುನಶ್ಚೇತನ,<br>- ಬೆಳೆದಿರುವ ಗಿಡ-ಗಂಟೆಗಳನ್ನು ತೆರವುಗೊಳಿಸುವುದು,<br>- ಕೆರೆ ಏರಿ ದುರಸ್ತಿಗೊಳಿಸುವುದು,<br>- ಕೆರೆ ಅಂಚಿನ ಖಾಲಿ ಪ್ರದೇಶಗಳಲ್ಲಿ ಸಸಿಗಳನ್ನು ಬೆಳೆಸುವುದು | ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ |
| 5. | ಕೆರೆಯ ಅಂಗಳವನ್ನು ಸುಂದರೀಕರಣಗೊಳಿಸುವುದು | - ಸಾಮಾಜಿಕ ಹೊಣೆಗಾರಿಕೆ ಕಾರ್ಯನೀತಿ ನಿಧಿ (CSR Fund),<br>- ಆರ್ಥಿಕ ದೇಣಿಗೆ/ ಸಾರ್ವಜನಿಕರಿಂದ ವಂತಿಕೆ (ಸರ್ಕಾರದ ಯೋಜನೆಗಳ ಅನುದಾನ ಬಳಸತಕ್ಕದ್ದಲ್ಲ) |

ಈ ಯೋಜನೆಗೆ ಇತರೆ ಮೂಲಗಳಿಂದ ದೊರೆಯಬಹುದಾದ ಆರ್ಥಿಕ ದೇಣಿಗೆ, ಶಾಸಕರ ಕ್ಷೇತ್ರಾಭಿವೃದ್ಧಿ ಅನುದಾನ, ಸಿಎಸ್ಆರ್ ಅನುದಾನವನ್ನು ಒಗ್ಗೂಡಿಸುವ ಮೂಲಕ ಅನುಷ್ಠಾನಗೊಳಿಸಬುಹುದಾಗಿದೆ.

## IV. ಅನುಷ್ಠಾನ ಸಂಸ್ಥೆಗಳು:

- ಗ್ರಾಮ ಪಂಚಾಯಿತಿಗಳು
- ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ
- ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ
- ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC)
- Bhaskaracharya Institute of Space Application and Geomatics-National (BISAG-N)

## V. ಪ್ರಗತಿ ವರದಿ

- ಕಾಮಗಾರಿಗಳ ಪ್ರಗತಿ ವರದಿಯನ್ನು ಆಯಾ ಮಾಹೆಯ 5ನೇ ತಾರೀಖಿನೊಳಗೆ ನಿಗಧಿತ ನಮೂನೆಯಲ್ಲಿ ತಪ್ಪದೇ ಸರ್ಕಾರಕ್ಕೆ ಸಲ್ಲಿಸುವುದು.
- ಪ್ರತಿ 15 ದಿನಕ್ಕೊಮ್ಮೆ ಆಯುಕ್ತಾಲಯಕ್ಕೆ ಅಮೃತ ಸರೋವರ ಕಾಯಕ್ರಮದಪ್ರಗತಿಯನ್ನು ಶೇಕಡಾ ಪ್ರಮಾಣದಲ್ಲಿ ಇಂಧೀಕರಿಸಿ ತಿಳಿಸುವುದು.

## VI. ಹಣ ಬಳಕೆ ಪ್ರಮಾಣ ಪತ್ರ

2022-23ನೇ ಸಾಲಿನಲ್ಲಿ ಸರ್ಕಾರದಿಂದ ಲೆಕ್ಕಶೀರ್ಷಿಕೆ 4702ರಡಿ ಬಿಡುಗಡೆಯಾದ ಅನುದಾನಕ್ಕೆ ಸಂಬಂಧಿಸಿದಂತೆ ಭರಿಸಲಾದ ವೆಚ್ಚಕ್ಕೆ ನಿಗಧಿತ ನಮೂನೆಯಲ್ಲಿ ಹಣ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

## VII. ದಾಖಲೆಗಳ ನಿರ್ವಹಣೆ

- ಗುರುತಿಸಲಾದ ಪ್ರತಿಯೊಂದು ಜಲಮೂಲ ಕಾಮಗಾರಿಗೆ ಪ್ರತ್ಯೇಕವಾದ ಕಡತವನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.
- ಅನುಮೋದಿತ ಕ್ರಿಯಾ ಯೋಜನೆಯಲ್ಲಿನ ಕಾಮಗಾರಿಗಳ ಸಂಖ್ಯೆ, ಅನುಮೋದಿತ ಮೊತ್ತ ಬಿಡುಗಡೆಯಾದ ಅನುದಾನ, ಅನುಮೋದಿತ ಗುತ್ತಿಗೆದಾರರ ಹೆಸರು ಮತ್ತು ವಿಳಾಸ, ಕಾಮಗಾರಿ ಪೂರ್ಣಗೊಂಡ ವಿವರ ಮತ್ತು ದಿನಾಂಕ, ಆರ್ಥಿಕ ವರ್ಷ ಹಾಗೂ ಇನ್ನಿತರೆ ವಿವರಗಳನ್ನು ಕಾಮಗಾರಿವಾರು ಗ್ರಾಮ ಪಂಚಾಯತಿ ರಿಜಿಸ್ಟರ್‌ನಲ್ಲಿ ನಮೂದಿಸತಕ್ಕದ್ದು
- ಅನುಮೋದಿತ ಕಾಮಗಾರಿ ಪೂರ್ಣಗೊಂಡ ಜಾಗದಲ್ಲಿ ಮೇಲಿನ ವಿವರಗಳನ್ನು ಉತ್ತಮ ಪೇಂಟ್‌ನಿಂದ ನಾಮಫಲಕದಲ್ಲಿ ಬರೆಯಿಸತಕ್ಕದ್ದು.

**VIII. ನಿರ್ವಹಣೆ ಹಾಗೂ ಜವಾಬ್ದಾರಿ**

ಕಾಮಗಾರಿ ಪೂರ್ಣಗೊಂಡ ನಂತರ ಗ್ರಾ.ಪಂ ಮಟ್ಟದಲ್ಲಿ ನಿರ್ವಹಣೆ ಮಾಡತಕ್ಕದ್ದು ಹಾಗೂ ಪ್ರತಿ ಕಾಮಗಾರಿಯ ಪ್ರಾಥಮಿಕ ಹಂತದಿಂದ ಮುಕ್ತಾಯದ ಹಂತದವರೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ ಇವರಿಗೆ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ನೀಡಿದೆ.

**(ಎಲ್.ಕೆ.ಅತೀಕ್)**
**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ**

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ

**ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಸಲ್ಲಿಸಿದೆ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಇವರ ಆಪ್ತ ಕಾರ್ಯದರ್ಶಿಗಳಿಗೆ, ವಿಧಾನ ಸೌಧ, ಬೆಂಗಳೂರು.
2. ಪ್ರಾದೇಶಿಕ ಆಯುಕ್ತರುಗಳು, ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಬೆಳಗಾವಿ
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
4. ಆಯುಕ್ತರು, ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
5. ಆಯುಕ್ತರು ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
6. ಆಯುಕ್ತರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
7. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಅನಂದ್ ವೃತ್ತ, ಬೆಂಗಳೂರು.
8. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ಕೆರೆ ಸಂರಕ್ಷಣೆ & ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
9. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್, ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ಲಲಿತ ಮಹಿಲ್ ರಸ್ತೆ, ಮೈಸೂರು.
10. ನಿರ್ದೇಶಕರು, ಕರ್ನಾಟಕ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC), ಬೆಂಗಳೂರು.
11. ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ, ಬೆಂಗಳೂರು.
12. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯತಿ ಮುಖೇನ)
13. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳ Natural Resource Data Management System ನೋಡಲ್ ಅಧಿಕಾರಿಗಳಿಗೆ (ಜಿಲ್ಲಾ ಪಂಚಾಯತಿ ಮುಖೇನ)
14. ರಾಜ್ಯದ ಎಲ್ಲಾ ಜಿಲ್ಲಾ ಮಟ್ಟದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಜಿಲ್ಲಾ ಪಂಚಾಯತಿ ಮುಖೇನ)
15. ಇತರೆ ಸಂಬಂಧಪಟ್ಟ ಇಲಾಖೆಗಳಿಗೆ
16. ಹೆಚ್ಚಿನ ಪ್ರತಿಗಳು

ಅನುಬಂಧ - 1

**2022-23 ನೇ ಸಾಲಿಗೆ ಕೆರೆ ಅಭಿವೃದ್ಧಿ ಮತ್ತು ಮಿಷನ್ ಅಮೃತ ಸರೋವರ ಯೋಜನೆಗೆ ಜಿಲ್ಲಾವಾರು ನಿಗಧಿಪಡಿಸಿರುವ ಗುರಿ**

| ಕ್ರ.ಸಂ. | ಜಿಲ್ಲೆ | ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ | ಮಿಷನ್ ಅಮೃತ ಸರೋವರ ಯೋಜನೆಯಡಿ ಗುರುತಿಸಬೇಕಾದ ಜಿಲ್ಲಾವಾರು ಗುರಿ | ಜಿಲ್ಲಾವಾರು ಕೆರೆಗಳ ಗುರಿ (ಕಾಲಂ- 4 ರಲ್ಲಿನ ಆಯ್ದ ಕೆರೆಗಳ ಪೈಕಿ ಲೆ.ಶೀ 4702 ರಡಿ ಅನುದಾನ ಒದಗಿಸುವ ಕೆರೆಗಳ ಗುರಿ) |
|---|---|---|---|---|
| **1** | **2** | **3** | **4** | **5** |
| 1 | ಬಾಗಲಕೋಟೆ | 196 | 75 | 33 |
| 2 | ಬಳ್ಳಾರಿ | 100 | 75 | 17 |
| 3 | ಬೆಳಗಾವಿ | 498 | 75 | 84 |
| 4 | ಬೆಂಗಳೂರು ನಗರ | 86 | 75 | 14 |
| 5 | ಬೆಂಗಳೂರು ಗ್ರಾಮೀಣ | 101 | 75 | 17 |
| 6 | ಬೀದರ್ | 185 | 75 | 31 |
| 7 | ಚಿಕ್ಕಬಳ್ಳಾಪುರ | 130 | 75 | 22 |
| 8 | ಚಾಮರಾಜನಗರ | 157 | 75 | 26 |
| 9 | ಚಿಕ್ಕಮಗಳೂರು | 226 | 75 | 38 |
| 10 | ಚಿತ್ರದುರ್ಗ | 189 | 75 | 32 |
| 11 | ದಕ್ಷಿಣ ಕನ್ನಡ | 223 | 75 | 37 |
| 12 | ದಾವಣಗೆರೆ | 195 | 75 | 33 |
| 13 | ಧಾರವಾಡ | 144 | 75 | 24 |
| 14 | ಗದಗ | 122 | 75 | 21 |
| 15 | ಹಾಸನ | 267 | 75 | 45 |
| 16 | ಹಾವೇರಿ | 223 | 75 | 37 |
| 17 | ಕಲಬುರಗಿ | 261 | 75 | 44 |
| 18 | ಕೊಡಗು | 104 | 75 | 18 |
| 19 | ಕೋಲಾರ | 156 | 75 | 26 |
| 20 | ಕೊಪ್ಪಳ | 153 | 75 | 26 |
| 21 | ಮಂಡ್ಯ | 233 | 75 | 39 |
| 22 | ಮೈಸೂರು | 256 | 75 | 43 |
| 23 | ರಾಯಚೂರು | 178 | 75 | 30 |
| 24 | ರಾಮನಗರ | 126 | 75 | 21 |
| 25 | ಶಿವಮೊಗ್ಗ | 262 | 75 | 44 |
| 26 | ತುಮಕೂರು | 330 | 75 | 55 |
| 27 | ಉಡುಪಿ | 155 | 75 | 26 |
| 28 | ಉತ್ತರ ಕನ್ನಡ | 229 | 75 | 38 |
| 29 | ವಿಜಯನಗರ | 137 | 75 | 23 |
| 30 | ವಿಜಯಪುರ | 211 | 75 | 35 |
| 31 | ಯಾದಗಿರಿ | 122 | 75 | 21 |
| **ಒಟ್ಟು** | | **5955** | **2325** | **1000** |

**(ಎಲ್. ಕೆ. ಅತೀಕ್)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ